ಕಾಣಬೇಕೆಂದರೆ, ದೆಹಲಿಯಿಂದ ಮುಂಬೈಗೆ ಹಾರಬೇಕು. ಅದೊಂದು ಸಂಜೆ ಪಯಣ. ಮಹಾಗೋಡೆಯಂತಿರುವ ಸಹ್ಯಾದ್ರಿಯ ಬೋಳು ಶಿಖರಗಳ ಒಂದು ಪಾರ್ಶ್ವಕ್ಕೆ ಬಿಸಿಲುಬಿದ್ದಿತ್ತು. ಇನ್ನೊಂದೆಡೆ ನೆರಳಿತ್ತು. ಎದೆ ಝಲ್ಲೆನಿಸುವ ಈ ಶಿಖರಗಳು, ಆಳ ಕಮರಿಗಳ ಸಮ್ಮುಖದಲ್ಲಿ ಮುಗಿಲನ್ನು ಚುಂಬಿಸಲು ಏರುತ್ತಿರುವ ಗೊಮ್ಮಟರಾಗಿದ್ದವು. ಅವುಗಳ ಮೈಮೇಲೆ ಬೆಳೆದ ತೇಪೆಕಾಡು ವನಮಾಲೆಯಾಗಿತ್ತು. ವಿಮಾನದಿಂದ, ಜ್ಯಾಮಿತಿಯ ಆಕೃತಿಗಳಲ್ಲಿ ತೇಪೆಹಚ್ಚಿದ ಕೌದಿಯಂತಿರುವ ಉತ್ತು ಬಿತ್ತಿದ ಪೈರುನಿಂತ ಕೊಯಿಲಾದ ಹೊಲಗದ್ದೆ ನೋಡುವುದು ನನಗೆ ಪ್ರಿಯ. ಇವನ್ನು ಆಯಾ ನಾಡಿನ ಆರ್ಥಿಕತೆಯ ಕನ್ನಡಿಗಳೆನ್ನಬಹುದು. ಅರಬ್ ದೇಶಗಳ ಮೇಲೆ, ಓಯಸಿಸ್ ಇರುವೆಡೆ ಖರ್ಜೂರ ತೋಟಗಳನ್ನು ಬಿಟ್ಟರೆ ಹಸಿರೇ ಕಾಣದು.

ಯಾಕೋ ಏನೋ, ಮುಗಿಲಿನಿಂದ ಸಮುದ್ರ ಅರಣ್ಯಗಳು ನೀಡುವ ಪುಳಕವನ್ನು ಮರಳುಗಾಡು ಕೊಡದು. ಅದು ನಿತ್ರಾಣವಾಗಿ ಮಲಗಿದ ರೋಗಿಯಂತೆ ವಿಷಾದ ಹುಟ್ಟಿಸುತ್ತದೆ. ನೂರಾರು ಮೈಲುಗಳಷ್ಟು ನಿಡಿದಾಗಿರುವ ಝಗ್ರಾಸ್ ಬೋಳುಬೆಟ್ಟಗಳನ್ನು ದಿಟ್ಟಿಸಿದರೆ, ಬುಡದಲ್ಲಿ ಮಣ್ಣಬಣ್ಣದ ಬೆಂಕಿಪೊಟ್ಟಣದಂತಹ ಮನೆಗಳನ್ನೂ ನೆಲದ ತೊಗಲಿಗೆ ಹತ್ತಿದ ಹುರುಕಿನಂತಿರುವ ಊರುಗಳನ್ನು ಗುರುತಿಸಬಹುದು. ಹೊರಪ್ರಪಂಚದ ಜತೆ ಇವುಗಳ ಸಂಬಂಧ ಹೇಗೋ ಎಂತೋ? ಬೇಸಾಯವಿಲ್ಲದೆ ಮಂದಿ ಏನುಂಡು ಬದುಕುವರೊ? ಹಕೀಕತ್ತು ಗೊತ್ತಾಗಬೇಕಾದರೆ ಕೆಳಗಿಳಿಯಬೇಕು. ಇಷ್ಟಂತೂ ದಿಟ. ಕೃಷಿಕಷ್ಟವಾದ ಮರಳುಗಾಡುಗಳು ವ್ಯಾಪಾರವನ್ನು ಬದಲಿಯಾಗಿ ಕಟ್ಟಿಕೊಳ್ಳುತ್ತವೆ. ಅವುಗಳ ಒಣತನ ಸಮೃದ್ಧ ತಾಣಗಳನ್ನು ಹುಡುಕಿ ಹೋಗಲು ಮಂದಿಯನ್ನು ಪ್ರಚೋದಿಸುತ್ತದೆ. ಬದುಕುಳಿಯಲು ಸೆಣಸಾಟ ಇರುವಲ್ಲಿ ತಾನೇ ಹೊಸ ಹುಡುಕಾಟ. ಚೀನಾದಿಂದ ಇಟಲಿ ತನಕ ಸಾಗುವ ಹೆಸರಾಂತ ಸಿಲ್ಕ್‌ರೂಟ್ ರೂಪುಗೊಂಡಿದ್ದು ಹೀಗೇ ಇರಬೇಕು. ಸುಡುವ ಮರುಭೂಮಿ ಮತ್ತು ಕೊರೆವ ಹಿಮಾಚ್ಛಾದಿತ ಪರ್ವತಗಳ ಒಳಗಿಂದ ದಾಟುವ ಈ ಹಾದಿಯೊಳಗೆ, ವಣಿಕರ ಕಾರವಾನುಗಳೂ, ಸೂಫಿಸಂತರ ಮತ್ತು ಧಮ್ಮಭಿಕ್ಷುಗಳ ದಿಂಡಿಗಳೂ, ದಿಗ್ವಿಜಯೋನ್ಮತ್ತ ಸೈನಿಕರ ರೋಳಿಗಳೂ ಸಹಸ್ರಾರು ವರುಷ ಓಡಾಡಿದವು. ಮಾರಣಾಂತಿಕವಾದ ತುಕ್ಲೆಮೆಕನ್ ಮರುಭೂಮಿಯೊಳಗೆ ನುಗ್ಗಿ ಹೊರಬರುವ ರೇಷ್ಮೆಹಾದಿಯ ಕಾಠಿಣ್ಯವನ್ನು, ಹ್ಯೂಯನ್‌ತ್ಸಾಂಗನ ಜೀವನಚರಿತ್ರೆಯಲ್ಲಿ ಓದುತ್ತ ನಾನು ನಡುಗಿಹೋದೆ. ಕೊಲೆಗಡುಕ ಮರಳುಗಾಡಿನ ದುರ್ಗಮ ಹಾದಿಯ ವ್ಯಾಪಾರಿಗಳು, ಕಡಲ ಕೋಲಾಹಲದ ನಾವಿಕರಿಗಿಂತ ದಿಟ್ಟರು. ಇವರು ಬಿಸಿಲು, ಮೃತ್ಯುಭೀತಿ, ದರೋಡೆಗಾರಿಕೆ, ಹಿಮಪಾತಗಳ ನಡುವೆ, ಅಪರೂಪದ ಸರಕನ್ನು ವಿನಿಮಯ ಮಾಡಿದವರು; ಹೊಸ ತತ್ವ, ಧರ್ಮ ಮತ್ತು ಜ್ಞಾನಗಳನ್ನು ಖಂಡಾಂತರಗಳಲ್ಲಿ ಪಸರಿಸಿದವರು.

ಆಗಸದಿಂದ ನೆಲ, ಸಮುದ್ರ, ಪರ್ವತಗಳು ಎಷ್ಟೇ ಚಂದ ಕಾಣಲಿ, ಅವು ಸೂಕ್ಷ್ಮ ವಿವರಗಳ ಸತ್ಯವನ್ನಡಗಿಸಿದ ಸ್ಥೂಲಚಿತ್ರಗಳು ಮಾತ್ರ. ಕಡಲೊಳಗಿನ ಜಲಚರಗಳಾಗಲಿ, ಮರುಭೂಮಿಯೊಳಗಿನ ಒಂಟೆಗಳಾಗಲಿ; ಕಾಡಿನ ಮರ, ಹೂಹಣ್ಣು, ಮೃಗಪಕ್ಷಿಗಳಾಗಲಿ, ಅಲ್ಲಿ ಗೈರುಹಾಜರು; ಆಯಾ ಪ್ರದೇಶದ ಉಡುಗೆ, ಭಾಷೆ, ಪೈರು, ಊಟ, ಹಾಡು ಕುಣಿತ ಗೊತ್ತಾಗದು. ಕಾಡು ತನ್ನ ಜಟಿಲಗರ್ಭದ ಅನಂತ ಚಲನೆಗಳನ್ನು ಅಡಗಿಸಿಕೊಂಡು ಸಪಾಟಾದ ಹಸಿರು ರತ್ನಗಂಬಳಿ ಆಗುತ್ತದೆ; ಬೆಂಗಳೂರು–ಕೊಚ್ಚಿ ಪಥದಲ್ಲಿ ಸಿಗುವ ಪಶ್ಚಿಮಘಟ್ಟದ ಶಿಖರಗಳು ಹಸಿರಗಡಲಲ್ಲಿ ತಲೆಯೆತ್ತಿದ ಸಣ್ಣ ತಿಮಿಂಗಿಲವಾಗುವವು; ರಬ್ಬರ್ ತಾಳೆ ಖರ್ಜೂರದ ತೋಟಗಳು ಕೇವಲ ಸಗಣಿ ತೊಪ್ಪೆಯಂತೆ ಗೋಚರಿಸುವವು; ಬಂಡೆಗಲ್ಲಿನ ದೊಡ್ಡಬೆಟ್ಟಗಳು ಮಕ್ಕಳಾಟಕ್ಕೆ ಪೇರಿಸಿಕೊಂಡ ಕಲ್ಲರಳಾಗುವವು. ಯೂರೋಪಿನ ಆಲ್ಪ್ಸ್ ಪರ್ವತ ಶ್ರೇಣಿ ನನಗೆ ಅಕ್ಕಿಹಿಟ್ಟಿನ ಗುಡ್ಡೆಯಂತೆಯೂ, ಶಿಖರಗಳು ನೆಲಮುಖಕ್ಕೆದ್ದ ಮೊಡವೆಗಳಂತೆಯೂ ತೋರಿದವು. ಮರ್ತ್ಯಲೋಕದ

